ಸಾಕ್ಷಿಯು ಕ್ರಮವಾಗಿ ಪ್ರಮಾಣಿಕರಿಸಿದ ದಿನಾಂಕಃ 05-07-2024

ಪಾಟಿ ಸವಾಲುಃ ಶ್ರೀ. ಪಿ.ಹೆಚ್.ಆರ್ ವಕೀಲರಿಂದ

ನನಗೆ ಫಿರ್ಯಾದಿಯ ಪರಿಚಯ ಇದೆ. ನಾನು ಅವರಲ್ಲಿ ಚೀಟಿ ಮತ್ತು ಪಿಗ್ಮಿ ಕಟ್ಟುತ್ತಿದ್ದೆ. ನಾನು ಫಿರ್ಯಾದಿಯ ಬಳಿ ಯಾವುದೇ ಪಿಗ್ಮಿ ಹಣ ಕಟ್ಟಿಲ್ಲ ಎಂದರೆ ಸರಿಯಲ್ಲ. ಪಿಗ್ಮಿ ಸಾಲ ಬೇಕೆಂದು ಅರ್ಜಿ ಸಲ್ಲಿಸಿಲ್ಲ. ಪಿಗ್ಮಿ ಹಣ ಕಟ್ಟಾಗ ರಶೀದಿ ಕೊಡುತ್ತಾರೆ ಎಂದರೆ ನನಗೆ ರಶೀದಿ ಕೊಟ್ಟಿಲ್ಲ. ಪಿಗ್ಮಿ ಸಾಲ ಪಡೆಯುವಾಗ ನನ್ನ ಮತ್ತು ನನ್ನ ಗಂಡನ ಚೆಕ್ ಅನ್ನು ಪಡೆದಿರುತ್ತಾರೆ ಬೇರೆ ಸಾಲ ಪಡೆದಿಲ್ಲ. ನಾನು ಮತ್ತು ನನ್ನ ಗಂಡನ ಯಾವುದೇ ಚೆಕ್ ಅನ್ನು ಫಿರ್ಯಾದಿಗೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಚೀಟಿ ಕಟ್ಟುವ ಸಮಯದಲ್ಲಿ ನನ್ನ ಮತ್ತು ನನ್ನ ಗಂಡನ ಎರಡು ಚೆಕ್ಕುಗಳನ್ನು ಕೊಟ್ಟಿದ್ದೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಫಿರ್ಯಾದಿ ಯಾವುದೇ ಚೀಟಿ ವ್ಯವಹಾರ ಮಾಡುತ್ತಿಲ್ಲ ಎಂದರೆ ಸರಿಯಲ್ಲ. ಫಿರ್ಯಾದಿಗೆ 98 ಸಾವಿರ ಬಾಕಿ ಕೊಡಬೇಕಾಗಿಲ್ಲ ಅದರ ಬದಲಿಗೆ 6 ಲಕ್ಷ ಹಣ ಕೊಡಬೇಕು ಎಂದರೆ ಸರಿಯಲ್ಲ.

ನಾನು ಫಿರ್ಯಾದಿಂದ 2022 ನೇ ಜೂನ್ 22 ಮೊದಲ ವಾರದಲ್ಲಿ ನನ್ನ ಗಂಡನ ವ್ಯವಹಾರಕ್ಕೆ 6 ಲಕ್ಷ ಹಣವನ್ನು ಸಾಲವಾಗಿ ಪಡೆದು ಅದರ ಮರು ಪಾವತಿಗಾಗಿ ನಿಪಿ 1 ರ ಚೆಕ್ ಕೊಟ್ಟಿದ್ದೆ ಎಂದರೆ ಸರಿಯಲ್ಲ. ನನ್ನ ಮತ್ತು ಫಿರ್ಯಾದಿ ನಡುವೆ ಯಾವುದೇ ಚೀಟಿ ಮತ್ತು ಪಿಗ್ಮಿ ವ್ಯವಹಾರ ನಡೆದಿಲ್ಲ ಎಂದರೆ ಸರಿಯಲ್ಲ. ನಾನು ಫಿರ್ಯಾದಿಗೆ ಮರು ಪಾವತಿ ಮಾಡಬೇಕಾಗುತ್ತದೆ ಎಂಬ ಬಾದ್ಯಸ್ಥಿಕೆಯಿಂದ ತಪ್ಪಿಸಿಕೊಳ್ಳಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ

ತಿಳಿಸಿರುವ ಎಲ್ಲಾ ಅಂಶಗಳು ಸುಳ್ಳು ಎಂದರೆ ಸರಿಯಲ್ಲ. ಫಿರ್ಯಾದಿಗೆ 6 ಲಕ್ಷ ಮರು ಪಾವತಿ ಮಾಡಲು ಬಾದ್ಯಸ್ಥಳು ಎಂದರೆ ಸರಿಯಲ್ಲ.

ಮುಂದುವರೆದ ಪಾಟಿ ಸವಾಲಿಗೆ ಸಮಯ ಕೋರಿದ್ದು ನೀಡಲಾಯಿತು.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ).**

Sd/-
ಓ ಹೇ ಕೇ ಸರಿ ಇದೆ

ಪ್ರ ದ ನ್ಯಾ ದಂ ಸೋ ಪೇಟೆ